**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮಧ್ಯ ಕಾಲಿನ ಅರ್ಜಿ 21 ರ ಆದೇಶದ ಮೇರೆಗೆ ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆ:- ಶ್ರೀ ಜೆ ಹೆಚ್ ಎಸ್ ವಕೀಲರಿಂದ 13 ನೇ ಪ್ರತಿವಾದಿಯ ಪರವಾಗಿ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇದ್ದು, ನಾನೇ ಹೇಳಿ ಬರೆಸಿದ್ದು, ಅದರಲ್ಲಿನ ಪ್ರಮಾಣಕರ್ತನ ಸಹಿಗಳು ನನ್ನದೇ ಇರುತ್ತವೆ ಹಾಗೂ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುತ್ತಿದ್ದೇನೆ.

2. ನನ್ನ ಪರವಾಗಿ ಮೊಹಮ್ಮದ್ ಅಕ್ಬರ್ ಸಾಬ್‌ರವರ ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದು ಅದನ್ನು ನಿಡಿ-19 ಎಂದು, ಕುಟುಂಬ ಪಡಿತರ ಚೀಟಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-20 ಎಂದು, ಅಕ್ಬರ್ ಸಾಬ್‌ರವರ ಚುನಾವಣಾ ಆಯೋಗದ ಗುರುತಿನ ಚೀಟಿ ಹಾಜರುಪಡಿಸಿದ್ದು ಅದನ್ನು ನಿಡಿ-21 ಎಂದು, ಡಿಜಿಟಲ್ ದೃಢೀಕೃತ ನಕಲಿನ 7 ಪಹಣಿಗಳನ್ನು ಕ್ರಮವಾಗಿ ನಿಡಿ-22 ರಿಂದ ನಿಡಿ-28 ಎಂದು, ಅಕ್ಬರ್ ಸಾಬ್ ರವರು ಜಮೀರ್ ಪಾಷಾ ರವರಿಗೆ ಬರೆದುಕೊಟ್ಟಿರುವ ನೋಂದಾಯಿಸದ ವಿಲ್ ಎಂದು ಹಾಜರುಪಡಿಸಿದ್ದು ಈ ಹಂತದಲ್ಲಿ ವಾದಿಯ ಪರ ಶ್ರೀ ಕೆ ಪಿ ಎಂ ವಕೀಲರು ಹಾಜರು ಇದ್ದು ತಕರಾರು ಇದೇ ಎಂದು ಹೇಳುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ರುಜುವಾತು ಪಡಿಸುವ ಹೊಣೆಗಾರಿಕೆಗೆ ಒಳಪಡಿಸಿ ನಿಡಿ-29 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:-</u> ವಾದಿಯರ ಪರ ಶ್ರೀ ಕೆ ಟಿ ಎಂ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ